**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ, ಇವರು ನಿಯಮ-330ರಡಿ ನೀಡಿರುವ ಸೂಚನಾ ಪತ್ರಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ**

**ಪ್ರಶ್ನೆ:**

ನಮ್ಮ ನೆರೆ ರಾಜ್ಯವಾದ ಕೇರಳ ಸರ್ಕಾರ ತನ್ನ ಕನ್ನಡ ವಿರೋಧಿ ಧೋರಣೆಯನ್ನು ಮುಂದುವರೆಸಿದ್ದು, ಗಡಿನಾಡಾಗಿರುವ ಹಿನ್ನೆಲೆಯಲ್ಲಿ ಕಾಸರಗೋಡು ಕನ್ನಡಿಗರಿಗೆ ಈವರೆಗೆ ಸಿಗುತ್ತಿದ್ದ ಸೌಲಭ್ಯಗಳು ಹಾಗೂ ಉದ್ಯೋಗಗಳನ್ನು ಕಸಿದುಕೊಂಡು ಅವರನ್ನು ಸಂಕಷ್ಟಕ್ಕೆ ಈಡು ಮಾಡಿದೆ.

ಗಡಿನಾಡ ಕನ್ನಡಿಗರ ಮೂಲಭೂತ ಹಕ್ಕಿಗೆ ಕೊಡಲಿ ಹಾಕುವ ದುಸ್ಸಾಹಸಕ್ಕೆ ಇಳಿದಿರುವ ಕೇರಳ ಸರ್ಕಾರಕ್ಕೆ ತನ್ನ ತೀವ್ರ ವಿರೋಧ ಹಾಗೂ ಪ್ರತಿಭಟನೆ ಸೂಚಿಸುವುದರ ಜೊತೆಗೆ ಗಡಿನಾಡ ಕನ್ನಡಿಗರ ಹಿತರಕ್ಷಣೆಯ ಹೊಣೆಗಾರಿಕೆ ತನ್ನ ಆದ್ಯ ಕರ್ತವ್ಯ ಎಂಬ ಸ್ಪಷ್ಟ ನಿಲುವು ತಿಳಿಸಲು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಗಡಿನಾಡ ಕನ್ನಡಿಗರ ರಕ್ಷಣೆ ಹಾಗೂ ಅವರಿಗೆ ನ್ಯಾಯಯುತವಾಗಿ ಸಿಗಬೇಕಾಗಿರುವ ಸೌಲಭ್ಯ ಹಾಗೂ ಉದ್ಯೋಗಗಳನ್ನು ದೊರಕಿಸಿಕೊಡಲು ಸರ್ಕಾರ ಅಗತ್ಯ ಹಾಗೂ ತ್ವರಿತ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:**

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅನುದಾನ ಮಿತಿಯಲ್ಲಿ ಪ್ರತಿ ವರ್ಷ ಗಡಿ ಭಾಗದ ಕಾಸರಗೋಡಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ತರಗತಿಯಲ್ಲಿ ಓದುತ್ತಿರುವ ಕನ್ನಡಿಗರ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಕ್ಕೆ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡುವ ಮೂಲಕ ಅಲ್ಲಿನ ಕನ್ನಡಿಗರ ಹಿತವನ್ನು ಕಾಯುತ್ತಿದೆ. ಅದರಂತೆ, 2023-24ನೇ ಸಾಲಿನಲ್ಲಿ 143 ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿಯನ್ನು ನೀಡಿ ಪ್ರೋತ್ಸಾಹಿಸಲಾಗಿದೆ.

ಕಾಸರಗೋಡು ಮೂಲತಃ ಕರ್ನಾಟಕದ ಭೂಭಾಗವಾಗಿದ್ದು, ಇಲ್ಲಿನ ಬಹುತೇಕ ಗ್ರಾಮಗಳ ಹೆಸರುಗಳು ಕನ್ನಡ ಭಾಷೆಯಲ್ಲಿರುತ್ತವೆ. ಆದರೆ ಕೇರಳ ಸರ್ಕಾರವು ಕೆಲವು ಕನ್ನಡ ಭಾಷಿತ ಗ್ರಾಮಗಳ ಹೆಸರುಗಳನ್ನು ಮಲೆಯಾಳಿಕರಣಗೊಳಿಸಿದ್ದ ಬಗ್ಗೆ, ಮಲೆಯಾಳಿಕರಣ ಮಾಡಿರುವ ಗ್ರಾಮಗಳ ಹೆಸರುಗಳನ್ನು ಹಿಂತೆಗೆದುಕೊಳ್ಳುವಂತೆ ಈ ಹಿಂದೆ ಕೋರಲಾಗಿ, ಇದಕ್ಕೆ ಕೇರಳ ಮುಖ್ಯಮಂತ್ರಿಗಳು, ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

ಆದರೆ, ಇಂತಹ ಕೃತ್ಯಗಳು ಮತ್ತೆ ಮುಂದುವರೆದ ಕಾರಣ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಕೇರಳ ರಾಜ್ಯದ ಮುಖ್ಯಮಂತ್ರಿಗಳನ್ನು ದಿನಾಂಕ:06-02-2023 ರಂದು ಭೇಟಿ ಮಾಡಿ ಅಹವಾಲನ್ನು ಸಲ್ಲಿಸಿ ಗ್ರಾಮಗಳ ಹೆಸರು, ರಸ್ತೆ, ಪೋಸ್ಟ್ ಆಫೀಸ್, ಪೋಲೀಸ್ ಠಾಣೆ, ಬ್ಯಾಂಕ್, ಅಂಗನವಾಡಿ ಕೇಂದ್ರ ಮತ್ತು ರೇಷನ್ ಕಾರ್ಡ್ ಗಳಲ್ಲಿ ಭಾರತ ಸಂವಿಧಾನದ ದ್ವಿಭಾಷಾ ನೀತಿಯಂತೆ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಮುದ್ರಿಸಲು ವಿನಂತಿಸಿರುತ್ತಾರೆ.

ಕೇರಳ ಸರ್ಕಾರವು ಕನ್ನಡ ಮಾಧ್ಯಮ ಶಾಲೆಗಳಿಗೆ ಕನ್ನಡ ಭಾಷೆ ಗೊತ್ತಿಲ್ಲದ ಮಲಯಾಳಿ ಶಿಕ್ಷಕರನ್ನು ನೇಮಕ ಮಾಡಿರುವುದನ್ನು ಕಾಸರಗೋಡಿನ ಕನ್ನಡ ಸಂಘಟನೆಗಳು ಪ್ರತಿಭಟಿಸಿ, ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿರುತ್ತವೆ.

ಕೇರಳ ರಾಜ್ಯದ ಉಚ್ಚ ನ್ಯಾಯಾಲಯವು W.P:21835/2023 ದಿನಾಂಕ: 21.08.2023ರಲ್ಲಿ ಕನ್ನಡ ಬಾರದ ಮಲಯಾಳಿ ಶಿಕ್ಷಕರನ್ನು ಕನ್ನಡ ಮಾಧ್ಯಮದ ಶಾಲೆಯಿಂದ ವಾಪಸ್ಸು ಪಡೆಯಲು ಆದೇಶಿಸಿರುತ್ತದೆ.

ಇದೇ ರೀತಿ ಅನ್ಯ ಭಾಷೆಯ ಸಿಬ್ಬಂದಿಯನ್ನು ಕೋರಿಕಂಡಂ ಕಾಸರಗೋಡು ಜಿಲ್ಲೆಯ ಅಂಗನವಾಡಿ ಕೇಂದ್ರಕ್ಕೆ ಶಿಕ್ಷಕಿಯಾಗಿ ನೇಮಕ ಮಾಡಿದ್ದನ್ನು ಈ ಅಂಗನವಾಡಿಯ ಮಕ್ಕಳ ಪೋಷಕರು ಕೇರಳ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ: WP: 41238/2024 ರಲ್ಲಿ ಪ್ರಶ್ನಿಸಿದ್ದು, ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ:13.02.2025ರಲ್ಲಿ ಶಿಕ್ಷಕಿಯ ನೇಮಕಾತಿಯನ್ನು ರದ್ದುಗೊಳಿಸಿರುತ್ತದೆ.

ಕೇರಳ ಸರ್ಕಾರದ ಅಡ್ಮಿನಿಸ್ಟ್ರೇಟೀವ್ ಟ್ರಿಬುನಲ್ OA(EKM) 145/2023ರ ಕೇಸಿನ ಬಗ್ಗೆ ದಿನಾಂಕ:05.03.2024ರಲ್ಲಿ ಸಮಗ್ರವಾದ ಆದೇಶ ಹೊರಡಿಸಿ, ಇಂತಹ ಭಾಷಾ ಅಲ್ಪಸಂಖ್ಯಾತ ಪ್ರದೇಶಗಳಲ್ಲಿ ಸಂವಿಧಾನದತ್ತ ಅವಕಾಶಗಳಿಗೆ ಭಾದಕವಾಗದಂತೆ, ಎಚ್ಚರವಹಿಸುವಂತೆ ಮತ್ತು ಇವರಿಗೆ ಔದ್ಯೋಗಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸವಲತ್ತುಗಳನ್ನು ನಿಯಮಾನುಸಾರ ನೀಡುವಂತೆ ಜಿಲ್ಲಾಧಿಕಾರಿಗಳು ತಿರುವನಂತಪುರ, ಇಡುಕ್ಕಿ, ಪಾಲಕ್ಕಾಡು ಮತ್ತು ಕಾಸರಗೋಡು ಜಿಲ್ಲೆಗಳಿಗೆ ನಿರ್ದೇಶನ ನೀಡಿರುತ್ತದೆ.

**ಸಂಖ್ಯೆ.ಕಸಂವಾ 27 ಕೆಓಎಲ್ ಆಕ 2025**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು